# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 861 (912)
ಮಾನ್ಯ ಸದಸ್ಯರ ಹೆಸರು : ಶ್ರೀ ಬಿ.ಜಿ.ಪಾಟೀಲ್
ಉತ್ತರಿಸುವ ದಿನಾಂಕ : 24-08-2026
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ನಡೆಯುತ್ತಿರುವ ವಸತಿ ನಿಲಯಗಳಲ್ಲಿ ಬೆಡ್ ಹಾಗೂ ಮಂಚಗಳಿಲ್ಲದೆ ವಿದ್ಯಾರ್ಥಿಗಳು ನೆಲದ ಮೇಲೆ ಮಲಗಿಕೊಳ್ಳುವ ಸ್ಥಿತಿ ಎದುರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಕಲಬುರಗಿ ಜಿಲ್ಲೆಯಲ್ಲಿರುವ ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಬರುವ ವಸತಿ ನಿಲಯಗಳಿಗೆ ಬೆಡ್, ಕಾಟ್, ಆರ್‌ಓ ಫಿಲ್ಟರ್, ಸಿಸಿ ಕ್ಯಾಮೆರಾ, ಸ್ಟಡಿ ಚೇರ್, ಟಿ.ವಿ, ಹೈಮಾಸ್ಟ್ ಲೈಟ್ ಇನ್ನಿತರೆ ಮೂಲ ಸೌಲಭ್ಯಗಳ ಅವಶ್ಯಕತೆಯಿರುವುದರಿಂದಾಗಿ ಸಂಬಂಧಪಟ್ಟ ಅಧಿಕಾರಿಗಳಿಂದ ಸರ್ಕಾರಕ್ಕೆ ಬೇಡಿಕೆ ಬಂದಿರುವುದು ನಿಜವೇ; (ಪ್ರತಿ ನೀಡುವುದು) ಬೇಡಿಕೆಗೆ ಇದುವರೆಗೂ ಸ್ಪಂದಿಸದಿರಲು ಕಾರಣವೇನು; ಮತ್ತು ಯಾವ ಕಾಲಮಿತಿಯೊಳಗೆ ವಸತಿ ನಿಲಯಗಳಿಗೆ ಮೂಲ ಸೌಕರ್ಯಗಳ ಸೌಲಭ್ಯ ನೀಡಲಾಗುವುದು; | ಕಲಬುರಗಿ ಜಿಲ್ಲೆಯಲ್ಲಿರುವ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಮೂಲಭೂತ ಸೌಕರ್ಯಗಳಾದ ಟೂ ಟಯರ್ ಕಾಟ್ ಹಾಗೂ ಮ್ಯಾಟ್ರಸ್‌ಗಳನ್ನು ಸರಬರಾಜು ಮಾಡಲು ಜಿಲ್ಲೆಯಿಂದ ಬೇಡಿಕೆ ಸ್ವೀಕೃತವಾಗಿದ್ದು, ಎಲ್ಲಾ ಜಿಲ್ಲೆಗಳ ಒಟ್ಟಾರೆ ಬೇಡಿಕೆಯಾನುಸಾರ ರಾಜ್ಯವಲಯದಿಂದ ಕೆಟಿಪಿಪಿ ನಿಯಮಾವಳಿಗಳನ್ವಯ ಇ-ಟೆಂಡರ್ ಮೂಲಕ ಖರೀದಿಸಿ ಪೂರೈಸಲು ಕ್ರಮವಹಿಸಲಾಗುತ್ತಿದೆ.<br><br>2026-27ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-181 ರಲ್ಲಿನ ಘೋಷಣೆಯಂತೆ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳಾದ ಟೂ ಟಯರ್ ಕಾಟ್, ಕಾಯರ್ ಮ್ಯಾಟ್ರಸ್, ಸೋಲಾರ್ ವಾಟರ್ ಹೀಟರ್ ಮತ್ತು ಡ್ರೈನಿಂಗ್ ಟೇಬಲ್‌ಗಳನ್ನು ರೂ.25.00 ಕೋಟಿಗಳ ವೆಚ್ಚದಲ್ಲಿ ಪೂರೈಸಲು ಜಿಲ್ಲಾವಾರು ಕಾರ್ಯಕ್ರಮದಲ್ಲಿ ಒದಗಿಸಲಾಗಿದ್ದು, ಈ ಬಗ್ಗೆ ಕ್ರಮವಹಿಸಲಾಗುತ್ತಿದೆ.<br><br>ಮುಂದುವರೆದು 2026-27ನೇ ಸಾಲಿಗೆ ಇಲಾಖೆಯ ವಿದ್ಯಾರ್ಥಿ ನಿಲಯಗಳ ಮೂಲಭೂತ ಸೌಕರ್ಯ ಕಲ್ಪಿಸಲು ರಾಜ್ಯ ವಲಯ ವಿವಿಧ ಅಭಿವೃದ್ಧಿ ಯೋಜನೆ ಬಂಡವಾಳ ಲೆಕ್ಕಶೀರ್ಷಿಕೆ: 4225-01-796-0-01 ರಡಿ ರೂ.85.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದ್ದು, ಮೂಲಭೂತ ಸೌಕರ್ಯ ಕಲ್ಪಿಸಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| ಇ) | ಕಲಬುರಗಿ ಜಿಲ್ಲೆಗೆ ಹೊಸದಾಗಿ ವಸತಿ ನಿಲಯಗಳನ್ನು ಮಂಜೂರು ಮಾಡಲಾಗಿದೆಯೇ; ಮಾಡಿದ್ದಲ್ಲಿ, ಎಷ್ಟು ವಸತಿ ನಿಲಯಗಳನ್ನು ಮಂಜೂರು ಮಾಡಲಾಗಿದೆ; ಹಾಗೂ ಎಲ್ಲೆಲ್ಲಿ ವಸತಿ ನಿಲಯಗಳನ್ನು ನಿರ್ಮಿಸಲು ಯೋಚಿಸಲಾಗಿದೆ? (ವಿವರ ನೀಡುವುದು) | 2026-27ನೇ ಸಾಲಿನ ಆಯವ್ಯಯ ಘೋಷಣೆಯ ಕಂಡಿಕೆ-182 ರನ್ವಯ 150 ಸಂಖ್ಯಾಬಲದ 62 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಅನುಮೋದನೆ ನೀಡಿ ಆದೇಶವಾಗಿರುತ್ತದೆ. ಅದರಂತೆ ಜಿಲ್ಲೆಗಳಿಂದ ಬೇಡಿಕೆಯನ್ನು ಪಡೆದು ಹೆಚ್ಚಿನ ಬೇಡಿಕೆ ಇರುವ ಜಿಲ್ಲೆಗಳಿಗೆ ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುವುದು. |

**ಸಕಇ 785 ಪಕವಿ 2026**

(signature)

**(ಕೆ.ಹೆಚ್.ಮುನಿಯಪ್ಪ)**
**ಸಮಾಜ ಕಲ್ಯಾಣ ಸಚಿವರು**